**ಓ.ಎಸ್. ನಂ. 120/2017** **ಡಿ.ಡಬ್ಲ್ಯೂ- 2**

**ಸಾಕ್ಷಿಯನ್ನು ದಿನಾಂಕ 29.8.2024 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ**

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ಹತ್ತು ಗಣಕೀಕೃತ ಪಹಣಿಗಳನ್ನು ನಿಡಿ45 ರಿಂದ ನಿಡಿ54 ಎಂದು, ಐದು ಕೈಬರಹ ಪಹಣಿಯ ದೃಢೀಕೃತ ನಕಲನ್ನು ನಿಡಿ55 ರಿಂದ ನಿಡಿ59 ಎಂದು, ಒಂದು ಮ್ಯುಟೇಶನ್ ರಿಜಿಸ್ಟರಿನ ದೃಢೀಕೃತ ನಕಲನ್ನು ನಿಡಿ60 ಎಂದು, ಒಂದು ನಕಾಶೆಯ ದೃಢೀಕೃತ ನಕಲನ್ನು ನಿಡಿ61 ಎಂದು, ಆಕಾರ ಬಂಧುವಿನ ದೃಢೀಕೃತ ನಕಲನ್ನು ನಿಡಿ62 ಎಂದು, ದಿನಾಂಕ 17.9.2021 ರಂದು ಹೆಚ್.ಡಿ.ಕೋಟೆ ಪೋಲಿಸ್ ಠಾಣೆಗೆ ನೀಡಿದ ದೂರಿನ ದೃಢೀಕೃತ ನಕಲನ್ನು ನಿಡಿ63 ಎಂದು, ಪೋಲಿಸರು ನೀಡಿರುವ ಎರಡು ಸ್ವೀಕೃತಿಗಳ ದೃಢೀಕೃತ ನಕಲನ್ನು ನಿಡಿ64 ಮತ್ತು ನಿಡಿ65 ಎಂದು, ತೆರಿಗೆ ಪಾವತಿ ರಶೀದಿಯ ದೃಢೀಕೃತ ನಕಲನ್ನು ನಿಡಿ66 ಎಂದು, ಭೂ ನ್ಯಾಯಮಂಡಳಿಯವರು ನೀಡಿರುವ ಹಿಂಬರಹದ ದೃಢೀಕೃತ ನಕಲನ್ನು ನಿಡಿ67 ಎಂದು, ಡಿಮ್ಯಾಂಡ್ ರಿಜಿಸ್ಟರನ್ನು ನಿಡಿ68 ಎಂದು, ವಾದಿಯರ ಮನೆಗೆ ಸಂಬಂಧಪಟ್ಟ ನಾಲ್ಕು ಭಾವಚಿತ್ರಗಳನ್ನು ನಿಡಿ69 ರಿಂದ ನಿಡಿ72 ಎಂದು, ಅವುಗಳಿಗೆ ಸಂಬಂಧಪಟ್ಟ ಸಿ.ಡಿ ಯನ್ನು ನಿಡಿ73 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.